ದಿನಾಂಕಃ22-08-2019

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

ನಿಶಾನೆ ಡಿ 1, 1954 ರ ಪತ್ರ ಎಂದರೆ ಸರಿ. ಸದರಿ ಪತ್ರವನ್ನು ನಾನು 1954 ರಲ್ಲಿ ನೋಡಿದ್ದು ನಂತರ ಈ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಮೊದಲು ನನ್ನ ಬಳಿ ಇದ್ದು ನಂತರದಲ್ಲಿ ಕಳೆದು ಹೋಗಿರುತ್ತದೆ ನಂತರದಲ್ಲಿ ಹೌದು ಎಂದು ನುಡಿಯುತ್ತಾರೆ. ಒಂದು ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿಯು ಓದಿ ಸೈಯದ್ ಕರೀಂ ಸಾಬ್ ಬಿನ್ ಸೈಯದ್ ಬುಡೇನ್ ಸಾಬ್ ರವರಿಗೆ ರಸೂಲ್ ಖಾನ್ ಬಿನ್ ಹುಸೇನ್ ಖಾನ್ ರವರು ಕ್ರಯ ಮಾಡಿಕೊಟ್ಟಿರುತ್ತಾರೆ ಎಂದು ಓದಿರುತ್ತಾರೆ ಸಾಕ್ಷಿಯು ಮುಂದುವರೆದು ಅದು ಸುಳ್ಳು ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು ದಾವಾ ಆಸ್ತಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಪತ್ರದಲ್ಲಿ 10,000/- ರೂಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿರುವ ಚೆಕ್ಕುಬಂದಿ ಮತ್ತು ದಾವಾ ಆಸ್ತಿಯ ಚೆಕ್ಕುಬಂದಿ ಸರಿ ಇದೆ ಎಂದರೆ ಸರಿ. ಸದರಿ ಪತ್ರದಲ್ಲಿ ಸಾಕ್ಷಿದಾರರ ಸಹಿ ನನ್ನ ತಂದೆಯವರ ಹೆಸರು ಇದೆ ಮತ್ತು ಸೈಯದ್ ಕರೀಂ ಸಾಬ್ ರವರ ಹೆಸರು ಇದೆ ಎಂದರೆ ಸರಿ. ಸಾಕ್ಷಿಯು ದಾಖಲೆಯನ್ನು ತೋರಿಸಿದ್ದನ್ನು ಓದಿ ಬರೆದಿರುವುದು ನಿಜ ಆದರೆ ಅದರಲ್ಲಿರುವ ಎಲ್ಲಾ ವಿಚಾರಗಳು ಸುಳ್ಳು ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ ನನ್ನ ತಂದೆಯವರ ವಿಳಾಸ ಇದೆ ಎಂದರೆ ಸರಿ. ಸದರಿ ಪತ್ರದಲ್ಲಿ ದಿನಾಂಕಃ19-02-1979 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಿನಾಂಕದಂದು ನಮ್ಮ ತಂದೆಯವರು ಪ್ರತಿವಾದಿಯವರ ತಂದೆಯ ಹೆಸರಿಗೆ ಸ್ವಾಧೀನವನ್ನು ವಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪತ್ರದ ಆಧಾರದ ಮೇರೆಗೆ 1979 ರಲ್ಲಿ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಖಾತೆ ಆಗಿದೆ ಎಂದರೆ ಸುಳ್ಳು. ಸಾಕ್ಷಿಗೆ ಹಕ್ಕು ಬದಲಾವಣೆ ಪತ್ರವನ್ನು ತೋರಿಸಲಾಗಿ ಅದು ದಾವಾ ಆಸ್ತಿಗೆ ಸಂಬಂದಿಸಿರುತ್ತದೆ ಮತ್ತು ಸೈಯದ್ ಕರೀಂ ಸಾಬ್ ರವರ ಹೆಸರಿಗೆ ಬರೆದಿರುತ್ತಾರೆ ಎಂದು ಓದಿ ಹೇಳುತ್ತಾರೆ ಮುಂದುವರೆದು ಸಾಕ್ಷಿ ಅದು ಸೃಷ್ಟಿಸಿಕೊಂಡಿರುವ ದಾಖಲೆ ಅದರಲ್ಲಿರುವ ಅಂಶಗಳು ಸುಳ್ಳು ಎಂದು ಹೇಳುತ್ತಾರೆ. ಸದರಿ ದಾಖಲೆ 1979-80 ನೇ ಸಾಲಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ನೋಡಿ

ಅದರಲ್ಲಿ ಇದೆ ಆದರೆ ಸುಳ್ಳು ಎಂದು ಹೇಳುತ್ತಾರೆ. ಸದರಿ ವಿಚಾರದ ಬಗ್ಗೆ ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ದಿನಾಂಕಃ19-04-2003 ರಲ್ಲಿ 1 ನೇ ಪ್ರತಿವಾದಿಯವರಿಗೆ ಮನೆ ಕಟ್ಟಲು ಪರವಾನಿಗೆ ನೀಡಿರುತ್ತಾರೆ ಎಂದರೆ ಸುಳ್ಳು. 1988-89 ನೇ ಸಾಲಿನಿಂದ ದಾವಾ ಆಸ್ತಿಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿಯವರ ಹೆಸರಿಗೆ 2015-16 ನೇ ಸಾಲಿನವರೆಗೆ ಖಾತೆ ಇರುತ್ತದೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳು ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ 1954 ನೇ ಸಾಲಿನಿಂದ ಇಲ್ಲಿಯವರೆಗೆ ನನ್ನ ತಂದಯವರ ಹೆಸರಿಗಾಗಲೀ ಅಥವಾ ನನ್ನ ಹೆಸರಿಗಾಗಲೀ ಖಾತೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಇನ್ನು ಮಾಡಿಸಿಕೊಳ್ಳಬೇಕು ಎಂದು ನುಡಿಯುತ್ತಾರೆ. 1979-80 ರಿಂದ ಇಲ್ಲಿಯವರೆಗೆ ಕಂದಾಯ ರಶೀದಿಗಳು ಇವೆಯೇ ಎಂಬ ಪ್ರಶ್ನಗೆ ಸಾಕ್ಷಿಯು ಕಳೆದು ಹೋಗಿವೆ ಎಂದು ಹೇಳುತ್ತಾರೆ. ಸದರಿ ಕಳೆದು ಹೋಗಿರುವ ಬಗ್ಗೆ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. 1 ನೇ ಪ್ರತಿವಾದಿಯವರು 1984 ರಿಂದ 2016 ರವರೆಗೆ ಅವರು ದಾವಾ ಆಸ್ತಿಗೆ ಸಂಬಂದಿಸಿದಂತೆ ಪಂಚಾಯಿತಿಯಲ್ಲಿ ಕಂದಾಯ ಕಟ್ಟಿರುವ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯವರು ನಮ್ಮ ಸಂಬಂದಿಕರಾದ ಕಾರಣ ನಮ್ಮ ಹೆಸರಿನಲ್ಲಿ ಕಂದಾಯ ಕಟ್ಟುತ್ತೇನೆ ಎಂದು ತೆಗೆದುಕೊಂಡು ಹೋಗಿ ಕಂದಾಯ ಕಟ್ಟುತ್ತಿದ್ದರು ಆದ್ದರಿಂದ ಈ ಅನಾನುಕೂಲ ವಾಗಿದೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಆದ್ದರಿಂದ ನಾನು ವಾದ ಪತ್ರದಲ್ಲಿ ಬರೆಸಿರುವ ವಿಚಾರಕ್ಕೂ ಇಲ್ಲಿ ಹೇಳುತ್ತಿರುವ ವಿಚಾರಗಳಿಗೂ ತಾಳೆ ಆಗುವುದಿಲ್ಲ ಎಂದರೆ ಸಾಕ್ಷಿಯು ಕಳೆದುಹೋಗಿರುವುದು ಹೇಳದೆ ಇರುವುದು ತಪ್ಪು ಎಂದು ನುಡಿಯುತ್ತಾರೆ. 2016 ರಲ್ಲಿ ಇ-ಸ್ವತ್ತು 1 ನೇ ಪ್ರತಿವಾದಿಯವರ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1954 ಮತ್ತು 1979 ರಿಂದ ಸೃಷ್ಟಿಮಾಡಿಕೊಂಡಿರುವ ದಾಖಲೆಗಳ ಮೇಲೆ ನಾನು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ತಿಳಿದ ನಂತರ ಈ ದಾವೆಯನ್ನು ಹೂಡಿರುತ್ತೇನೆ.

ಸದರಿ ವಿಚಾರ ತಿಳಿದ ನಂತರ ಖಾತೆ ಬದಲಾವಣೆ ಆಗಿರುವ ಬಗ್ಗೆ ಪಂಚಾಯಿತಿ ಅಧಿಕಾರಿಗಳ ಮೇಲೆ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಪಂಚಾಯಿತಿ ಅಧಿಕಾರಿಗಳು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದ ಮೇಲೆ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತೇನೆ. ಸದರಿ ವಿಚಾರದ ಬಗ್ಗೆ ಪಂಚಾಯಿತಿಯವರು ಬರವಣಿಗೆಯನ್ನು ನೀಡಿರುವುದನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು

ಪಂಚಾಯಿತಿ ಅಧಿಕಾರಿಗಳು ದಿನಾಂಕಃ04-03-2016 ರಂದು ಮೌಖಿಕವಾಗಿ ತಿಳಿಸಿರುತ್ತಾರೆ. ನಾನು ಬರವಣಿಗೆ ಮೂಲಕ ಅರ್ಜಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಕಳೆದುಹೋಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಅರ್ಜಿಯನ್ನು ದಿನಾಂಕಃ04-03-2016 ರಂದು ನೀಡಿರುತ್ತೇನೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿರುತ್ತೇನೆ.

ದಾವಾ ಹೂಡುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ಯಾರು ವಾಸವಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇತ್ತು, ಸಾಕ್ಷಿಯು ಮುಂದುವರೆದು ಬಾಡಿಗೆದಾರರು ವಾಸವಾಗಿದ್ದರು ಎಂದು ನುಡಿಯುತ್ತಾರೆ. ದಾವಾ ಹೂಡುವ ಕಾಲಕ್ಕೆ 1 ನೇ ಪ್ರತಿವಾದಿ ಮತ್ತು ಪಂಚಾಯಿತಿಯವರ ಮೇಲೆ ಹೂಡಿರುತ್ತೇನೆ ಎಂದರೆ ಸರಿ. ದಾವಾ ಹೂಡುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ಎಷ್ಟು ಜನ ವಾಸವಾಗಿದ್ದಾರೆ ಎಂದು ನನಗೆ ಮಾಹಿತಿ ಇತ್ತು ಮತ್ತು ಅವರ ಹೆಸರು ಮತ್ತು ತಂದೆಯ ಹೆಸರು ನನಗೆ ಗೊತ್ತಿತ್ತು. ಸದರಿ ವಿಚಾರ ಬಗ್ಗೆ ನಾನು ವಕೀಲರಿಗೆ ತಿಳಿಸಿರುವುದಿಲ್ಲ. ಯಾವ ಕಾರಣಕ್ಕೆ ತಿಳಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಖಾತೆ ಬದಲಾವಣೆ ತಪ್ಪಾಗಿರುವ ಕಾರಣ ಅದನ್ನು ಸರಿಪಡಿಸಲು ಸದರಿಯವರು ಮಾತ್ರ ಅವಶ್ಯಕ ಎಂದು ಬೇರೆಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ದಾವಾ ಹೂಡವ ಕಾಲಕ್ಕೆ ಪಂಚಾಯಿತಿಯವರಿಗೆ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ವಿಧ್ಯುತ್ ಸರಬರಾಜು ನಮ್ಮ ಹೆಸರಿಗೆ ಅಥವಾ ನನ್ನ ತಂದೆಯವರ ಹೆಸರಿಗೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಗೆ 50 ವರ್ಷಗಳಿಂದ ವಿಧ್ಯುತ್ ಸರಬರಾಜು ಇದೆ. ಸದರಿ ವಿಧ್ಯುತ್ ಸರಬರಾಜು 1 ನೇ ಪ್ರತಿವಾದಿಯವರ ಹೆಸರಿಗೆ ಇದೆ ಆದರೆ ಅವರು ಅದನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅವಧಿಯಲ್ಲಿ ನಾನಾಗಲೀ ಅಥವಾ ನನ್ನ ತಂದೆಯವರಾಗಲೀ ಸದರಿ ವಿಚಾರದ ಬಗ್ಗೆ ಕೆಇಬಿರವರಿಗೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ದಿನಾಂಕಃ31-03-2017 ರಲ್ಲಿ ನಮ್ಮ ವಕೀಲರ ಮೂಲಕ ನೋಟಿಸ್ ನೀಡಿರುತ್ತೇನೆ. ನಿಶಾನೆ ಪಿ 5 ಕ್ಕೆ ನಿಶಾನೆ ಪಿ 6 ರಂತೆ ಉತ್ತರ ನೀಡಿರುವುದನ್ನು ನಾನು ತಿಳಿದುಕೊಂಡಿರುತ್ತೇನೆ. ನಿಶಾನೆ ಪಿ 5 ರಲ್ಲಿರುವ 8 ಜನ ನನಗೆ ಯಾವುದೆ ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮೌಖಿಕವಾಗಿ ವ್ಯವಹಾರ ಮಾಡಿಕೊಂಡಿರುತ್ತೇವೆ. ಸದರಿ ಮೌಖಿಕ ವ್ಯವಹಾರದ ದಿನಾಂಕ, ತಿಂಗಳು ಮತ್ತು ಇಸವಿ ಕೇಳಿದ್ದು ಸಾಕ್ಷಿಯು ಮೌನವಾಗಿ ಇರುತ್ತಾರೆ. ನಿಶಾನೆ ಪಿ 6 ರಂತೆ ಉತ್ತರ ನೀಡಿದ ನಂತರವೂ ನಿಶಾನೆ ಪಿ 5 ರಲ್ಲಿರುವ 8 ಜನ ನನಗೆ ಬಾಡಿಗೆ ನೀಡಿರುವುದಿಲ್ಲ ಎಂದರೆ ಸರಿ.

ನನ್ನ ತಂದೆ ದಿನಾಂಕಃ05-02-1982 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅಂದಿನಿಂದಲೂ ಇಲ್ಲಿಯವರೆಗೆ ದಾವಾ ಆಸ್ತಿಯ ಖಾತಾ ಬದಲಾವಣೆ ಕುರಿತು ಯಾವುದೆ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯವರನ್ನು ಹೊರತು ಪಡಿಸಿ ಬಸವಾ ಪಟ್ಟಣ ಗ್ರಾಮದಲ್ಲಿ ನನಗೆ ಬೇರೆ ಸಂಬಂದಿಕರು ಇದ್ದಾರೆ ಎಂದರೆ ಸರಿ. ಅವರುಗಳೆಂದರೆ ಹನೀಫಾ ಬೀ ಕೋಂ ಸತ್ತರ್. ಅವರು ಮರಣ ಹೊಂದಿ 10 ವರ್ಷಗಳಾಗಿರುತ್ತದೆ. ಅವರನ್ನು ಬಿಟ್ಟರೆ ನನಗೆ ಬೇರೆ ಸಂಬಂಧಿಕರು ಇರುವುದಿಲ್ಲ. ಹೊಸಕೆರೆ ಗ್ರಾಮದಲ್ಲಿ ನನಗೆ ಯಾರು ಸಂಬಂಧಿಕರು ಇಲ್ಲದ ಕಾರಣ ಸದರಿ ಗ್ರಾಮಕ್ಕೆ ಬಂದು ಹೋಗುವ ಪ್ರಮೇಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನವರ ಮನೆಗೆ ಬಂದು ಹೋಗುತ್ತಿದ್ದೆ ಅವರ ಮನೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಆಸ್ತಿಯ ಅರ್ಧ ಫರ್ಲಾಂಗ್ ದೂರದಲ್ಲಿ ಅವರ ಮನೆ ಇರುತ್ತದೆ. ನಿಶಾನೆ ಪಿ 5 ರಲ್ಲಿರುವ 8 ಜನಗಳು 1 ನೇ ಪ್ರತಿವಾದಿಗೆ 1979-80 ನೇ ಸಾಲಿನಿಂದ ಇಲ್ಲಿಯವರೆಗೆ ಬಾಡಿಗೆ ಕರಾರು ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಕರಾರು ಪತ್ರ ಎಷ್ಟು ಬಾಡಿಗೆಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ 5 ರಂತೆ ನಾನು 8 ಜನಗಳಿಗೆ ನೋಟಿಸ್ ನೀಡಿದ್ದು ಎಷ್ಟು ಬಾಡಿಗೆ ದರವನ್ನು ನಿಗದಿ ಮಾಡಿ ಬಾಡಿಗೆಗೆ ನೀಡಿರುತ್ತೇನೆ ಎಂದರೆ ಜಕ್ರಿಯಾ ರವರು ಎರಡು ಮಳಿಗೆಯಲ್ಲಿ ಬಾಡಿಗೆಗೆ ಇದ್ದು ಎರಡು ಮಳಿಗೆಗೆ ತಲಾ 2500/- ರೂ ನಂತೆ, ತಿಪ್ಪೇಶಪ್ಪನವರಿಗೆ 2500/- ರೂ ನಂತೆ ಒಂದು ಮಳಿಗೆ, ಅತವುಲ್ಲಾ ರವರಿಗೆ ಎರಡು ಮಳಿಗೆಗೆ ತಲಾ 2500/- ರೂ ನಂತೆ, ನೂರ್ ಅಹಮ್ಮದ್ ರವರಿಗೆ ಒಂದು ಮಳಿಗೆ 2500/- ರೂ ನಂತೆ, ಜಾಬೀರ್ ರವರಿಗೆ 2500/- ರೂ ನಂತೆ ಒಂದು ಮಳಿಗೆ, ನಯಾಜ್ ಸಾಬ್ ರವರಿಗೆ 1000/- ರೂ ನಂತೆ ಒಂದು ಮಳಿಗೆ, ಅಸ್ಲಾಂ ನವರಿಗೆ 1000/- ರೂ ನಂತೆ ಒಂದು ಮಳಿಗೆ, ಮಹಮ್ಮದ್ ಹನೀಫ್ ಸಾಬ್ ರವರಿಗೆ 5000/- ರೂ ನಂತೆ ಒಂದು ಮಳಿಗೆ ನೀಡಿರುತ್ತೇನೆ. ಜಕ್ರಿಯಾರವರು ಇರುವ ಮಳಿಗೆ ಅಳತೆ 12 ಅಗಲ 20 ಉದ್ದ, ಅದರ ಚೆಕ್ಕುಬಂದಿ ಪೂರ್ವಕ್ಕೆ ತಿಪ್ಪೇಶಪ್ಪನವರ ಮಳಿಗೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಅಬ್ದುಲ್ ಸತ್ತರ್ ರವರ ಹಿತ್ತಲು, ದಕ್ಷಿಣಕ್ಕೆ ನೀರಿನ ಕಾಲುವೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ